ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

ಚುಕ್ಕೆ ರಹಿತ ಪ್ರಶ್ನೆ

ದಿನಾಂಕ : 25-03-2021 ಪ್ರಶ್ನೆ ಸಂಖ್ಯೆ : 1841 (2190)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ : 25-03-2021

ಉತ್ತರಿಸುವ ಸಚಿವರು: ಮಾನ್ಯ ಮುಖ್ಯಮಂತ್ರಿಗಳು

ವಿಷಯ : ಜನಪ್ರತಿನಿಧಿಗಳ ಪತ್ರಗಳಿಗೆ ಜಿಲ್ಲಾಡಳಿತದಿಂದ ಸ್ಪಂದನೆ ದೊರಕದ ಕುರಿತು

(ಅ) ಕಳೆದ 3 ವರ್ಷಗಳಲ್ಲಿ ರಾಜ್ಯದ ವಿವಿಧ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ, ಕ್ಯಾಬಿನೇಟ್ ದರ್ಜೆ ಸಚಿವರಿಂದ ರಾಜ್ಯ ಮಂತ್ರಿಗಳಿಂದ ಉಭಯ ಸದನದ ಶಾಸಕರಿಂದ ಸಾರ್ವಜನಿಕ ಹಿತಾಸಕ್ತಿ ಹಾಗೂ ಇತರೆ ಅಭಿವೃದ್ದಿ ಕಾರ್ಯಗಳ ನ್ಯೂನತೆಯ ಬಗ್ಗೆ ಬರೆಯಲಾದ ಪತ್ರಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಈ ಪತ್ರಗಳಿಗೆ ಉತ್ತರ ಹಿಮ್ಮಾಹಿತಿ ನೀಡಿದ ಪತ್ರಗಳ ಸಂಖ್ಯೆ ಎಷ್ಟು; ಉತ್ತರ/ಹಿಂಬರಹ ನೀಡದೇ ಇರುವ ಪತ್ರಗಳ ಸಂಖ್ಯೆ ಎಷ್ಟು; ನೀಡದೇ ಇರಲು ಕಾರಣವೇನು;

(ಇ) ಸಾರ್ವಜನಿಕ ಹಿತಾಸಕ್ತಿಯಿಂದ ಜನಪ್ರತಿನಿಧಿಗಳು ಬರೆದ ಪತ್ರಗಳಿಗೆ ಹಿಮ್ಮಾಹಿತಿ ನೀಡದೇ ಇರುವ ಜಿಲ್ಲಾಧಿಕಾರಿಗಳ ನಿರ್ಲಕ್ಷ ಧೋರಣೆಯು ಶಾಸಕರ ಹಕ್ಕುಚ್ಯುತಿಯಾಗುವುದಿಲ್ಲವೇ; ಈ ನಿಟ್ಟಿನಲ್ಲಿ ಸರ್ಕಾರ ತೆಗೆದುಕೊಳ್ಳುವ ಕಟ್ಟುನಿಟ್ಟಿನ ಕ್ರಮಗಳಾವುವು ?